ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಸ್ವಾಮಿ, ಬೆಂಗಳೂರು ಪಿಂಗಾಣಿ ಕಾರ್ಖಾನೆಯಲ್ಲಿ ಪಿಂಗಾಣಿ ವಸ್ತುಗಳನ್ನು ತಯಾರು ಮಾಡತಕ್ಕಂಥ ರೀತಿಯಲ್ಲಿ ತಾವು ಹಾಕತಕ್ಕಂಥ ಕಂಪನಿಯಲ್ಲಿ ಈ ಪಿಂಗಾಣಿ ಸಾಮಾನುಗಳನ್ನು ತಯಾರು ಮಾಡಿದರೆ ಗ್ರಾಮಾಂತರ ಪ್ರದೇಶಗಳಿಗೆ ಈ ಒಂದು ಕೈಗಾರಿಕೆಯನ್ನು ವಿಸ್ತರಿಸುವುದಕ್ಕೆ ಅವಕಾಶ ಮಾಡಿದಂತಾಗುತ್ತದೆ ಹಾಗೂ ಅನೇಕ ನಿರುದ್ಯೋಗಿ ಜನಗಳಿಗೆ ನೌಕರಿಯನ್ನು ಒದಗಿಸಿದ ಹಾಗೆ ಆಗುತ್ತದೆ ಮತ್ತು ಅಲ್ಲಿ ತಯಾರಾಗತಕ್ಕಂಥ ವಿವಿಧ ಸಾಮಾನುಗಳನ್ನು ಉಪಯೋಗಿಸಿದ ಹಾಗೆ ಆಗುತ್ತದೆ. ಈ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ರೂಪಿಸಿ, ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಸಹಸ್ರಾರು ಮಂದಿಗೆ ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯವಿದೆ. ಈ ಬಗ್ಗೆ ಒಂದು ಯೋಜನೆಯನ್ನು ರೂಪಿಸಿ ಸರ್ಕಾರದವರ ಮುಂದೆ ಪರಿಶೀಲನೆಗಾಗಿ ಇಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ನಾನು ಈಗಾಗಲೇ ಹೇಳಿದ ಹಾಗೆ ಒಂದು ಹಂತದಲ್ಲಿ ಇದನ್ನು ಉಪಯೋಗ ಮಾಡಿಕೊಳ್ಳುತ್ತಾ ಇದ್ದೇವೆ. ಮಾನ್ಯ ಸದಸ್ಯರು ಹೇಳತಕ್ಕಂಥ ಅಭಿಪ್ರಾಯ ಏನಿದೆ ಅದು ನಾವು ಮುಂದೆ ಯೋಚನೆ ಮಾಡತಕ್ಕಂಥ ವಿಚಾರವಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಈಗ ಒಂದು ಕಂಪನಿಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಕಂಪನಿಯಿಂದ ಸುಮಾರು ೧೦ ಮೀಟರ್‌ಗಳ ವಿಸ್ತಾರದಲ್ಲಿ ಫೆರೋಜಿನಸ್ ಕ್ಲೇ ಸಿಕ್ಕುತಿದೆ ಎಂದು ನಾನು ಏನು ಹೇಳಿದೆ ಅದನ್ನು ಪ್ರತಿವರ್ಷ ೩೫೦೦ ಟನ್ ಗಳಷ್ಟು ಬಳಸುವುದರಿಂದ ಅಲ್ಲಿ ೭೫ ವರ್ಷಗಳ ಕಾಲ ನಾವು ಅಲ್ಲಿ ಕಾರ್ಖಾನೆಯನ್ನು ನಡೆಸುವುದಕ್ಕೆ ಸಾಧ್ಯ ಎನ್ನತಕ್ಕಂಥ ಅಂಶವೂ ಗೊತಾಗುತ್ತದೆ. ಅದನ್ನು ಡೈವರ್ಸಿಫೈ ಮಾಡಿ ಗ್ಲೇಸ್ ಟೈಲ್ಸ್ ಮಾಡತಕ್ಕಂಥ ಸಾಧ್ಯತೆ ಇದೆಯೆಂದು ಸಹ ಗೊತ್ತಾಗಿದೆ. ಈ ಕಂಪನಿ ಪ್ರಾರಂಭವಾದಮೇಲೆ ಹಂತಹಂತದಲ್ಲಿ ಮಾನ್ಯ ಸದಸ್ಯರು ಹೇಳತಕ್ಕಂಥ ವಿಚಾರವನ್ನು ಯೋಚನೆ ಮಾಡಬಹುದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ರಾಜ್ಯದಲ್ಲಿರುವ ಮೈಸೂರು ಮಿನರಲ್ ಸಂಸ್ಥೆಯವರು ಸ್ವಲ್ಪ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇದರ ಪೂರ್ಣ ಜವಾಬ್ದಾರಿಯನ್ನು ಕೊಟ್ಟು ಸಮಗ್ರ ರೂಪದಲ್ಲಿ ಇದನು ಬೆಳೆಸುವುದಕ್ಕೆ ಸರ್ಕಾರದವರು ಯೋಚನೆ ಮಾಡುವರೇ ?

ಶ್ರೀ ಕೆ. ಎಚ್. ರಂಗನಾಥ್.—ಅದು ಅಭಿಪ್ರಾಯದ ಮೇಲೆ.

2-00 P.M.

Payment of Salary and Pensions to the former Shanbhogs

761. SRI K. YENKATAPPA (Shikaripur).—Will the Minister for Revenue be pleased to State :—

(a) whether the Government has decided to sanction pay and pension to the ex-Shanbhogs ;

(b) if so, when the order would be issued for the sanction of pay and pensions to them ;

(c) the reasons for the delay in this regard ?

SRI B. BASAVALINGAPPA (Minister for Revenue)—

(a) There is no proposal before the Government for sanctioning pay and pensions to the ex-Shanbhogs. But, if the services of Shanbhogs are continued as village accountants officially, their pension will be paid provided they are entitled to it as per the provisions of the Pension Rules.

(b) & (c) These questions do not arise in view of reply given to clause (a) above.

ಶ್ರೀ ಕೆ. ಯಂಕಟಪ್ಪ.—ಮಾಜಿ ಶ್ಯಾನುಭೋಗರಿಗೆ ಒಟ್ಟಾರೆ ಸಂಭಾವನೆ ಅಥವಾ ವಿಶ್ರಾಂತಿ ವೇತನವನ್ನು ಕೊಡುವುದರ ಬಗ್ಗೆ ಸರ್ಕಾರದವರು ಇತ್ತೀಚೆಗೆ ಯೋಚನೆ ಮಾಡಿದ್ದಾರೆಯೇ ?

†ಶ್ರೀ ಬಿ. ಬಸವಲಿಂಗಪ್ಪ.—ಅನುವಂಶಿಕ ಪದ್ಧತಿ ಪ್ರಕಾರವಾಗಿ ಕೆಲಸ ಮಾಡುತ್ತಿದ್ದ ಶ್ಯಾನುಭೋಗರು ಮತ್ತು ಪಟೇಲರನ್ನು ಕಾಯಿದೆ ಪ್ರಕಾರ ವಜಾ ಮಾಡಲಾಗಿದೆ, ವಜಾ ಮಾಡಿದ ಮೇಲೆ ಅವರಿಗೆ ಸಂಭಾವನೆ ಅಥವಾ ವಿಶ್ರಾಂತಿ ವೇತನವನ್ನು ನೀಡಬೇಕೆಂದು ಮಾನ್ಯ ವೆಂಕಟಪ್ಪನವರು ಹೇಳುತ್ತಿದ್ದಾರೆ. ಹಾಗೆ ಕೊಡುವಾಗ, ಅರ್ಹತೆಯಿದ್ದು ಸೇವೆಯಲ್ಲಿ ಮುಂದುವರಿಯುತ್ತಿರುವವರಿಗೂ ಕೊಡಬೇಕೇ ಅಥವಾ ಬಿಡಬೇಕೇ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅಲ್ಲದೇ, ಅಂತಹವರನ್ನು ಬಿಟ್ಟು ಬೇರೆಯವರಿಗೆ ಕೊಡುವುದೂ ಸ್ವಲ್ಪ ಕಷ್ಟವಾಗುತ್ತದೆ. ಸರ್ಕಾರ ಇದನ್ನು ಪರಿಶೀಲನೆ ಮಾಡುವುದು.

ಶ್ರೀ ಕೆ. ಯಂಕಟಪ್ಪ.—ಅಂತಹ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ನನ್ನ ಗಮನಕ್ಕೆ ಬಂದಿಲ್ಲ; ನೋಡೋಣವೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸಂಸ್ಥಾನದಲ್ಲಿರುವ ಶ್ಯಾನುಭೋಗರೆಲ್ಲಾ ಸೇರಿ ತಮ್ಮ ಬಳಿಗೆ ನಿಯೋಗ ಬಂದು, ಒಂದು ಮುದ್ರಿತ ಮನವಿ ಕೊಟ್ಟಾಗ, ವಿಶ್ರಾಂತಿ ವೇತನ ಅಥವಾ ಗ್ರಾಚ್ಯುಯಿಟಿ ಅಥವಾ ಇನ್ಯಾವುದೇ ರೂಪದಲ್ಲಿ ತಮಗೆ ಸಂಭಾವನೆ ಕೊಡಲಾಗುವುದೆಂದು ತಾವು ಅವರಿಗೆ ಖಚಿತ ಆಶ್ವಾಸನೆ ಕೊಟ್ಟಿದ್ದಿರಿ, ಅದಿನ್ನೂ ಇತ್ಯರ್ಥವಾಗಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳಿರುವುದು ನಿಜ. ಕಲಂ ೯ ರ ಪ್ರಕಾರ ಯಾರು ಯಾರಿಗೆ ಪರಿಹಾರ ಕೊಡಬೇಕೋ ಅವರಿಗೆಲ್ಲಾ ಪರಿಹಾರ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ.

ಶ್ರೀ ಮಂಳ್ಳೂರು ಆನಂದರಾವ್.—ಮಾಜಿ ಶ್ಯಾನುಭೋಗರುಗಳ ಸೇವೆಯನ್ನು ಗ್ರಾಮ ಲೆಕ್ಕಿಗರಾಗಿ ಅಧಿಕೃತವಾಗಿ ಮುಂದುವರಿಸಿದಲ್ಲಿ ಅಂಥವರಿಗೆ ನಿವೃತ್ತಿ ವೇತನ ನಿಯಮದ ಪ್ರಕಾರ ಅರ್ಹತೆ ಇದ್ದಲ್ಲಿ, ನಿವೃತ್ತಿ ವೇತನವನ್ನು ಕೊಡಲಾಗುವುದೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಹಾಗಾದರೆ, ಅಧಿಕೃತವಾಗಿ ಮುಂದುವರಿಸಿದಲ್ಲಿ ಎಂದರೆ ಏನು? ವಯಸ್ಸು ಮತ್ತು ಅರ್ಹತೆ ಇರುವವರ ಸೇವೆಯನ್ನು ಉಪಯೋಗಿಸಿಕೊಳ್ಳುವುದರಲ್ಲಿ ಸರ್ಕಾರಕ್ಕಿರುವ ಅಡ್ಡಿ ಏನು? ಅವರಿಗೆ ರೆಗ್ಯುಲರ್ ವೇತನ ಶ್ರೇಣಿಯನ್ನು ನೀಡದಿದ್ದರೂ, ಯಾವುದಾದರೊಂದು ರೂಪದಲ್ಲಿ ಹಣ ಸಹಾಯ ಮಾಡಿ ಅವರ ಸೇವೆಯನ್ನು ಸರ್ಕಾರ ಏತಕ್ಕೆ ಉಪಯೋಗಿಸಿಕೊಳ್ಳಬಾರದು?

ಶ್ರೀ ಬಿ. ಬಸವಲಿಂಗಪ್ಪ.—ಕಾನೂನು ಪ್ರಕಾರ ಅರ್ಹತೆ ಇರುವವರನ್ನು ಮುಂದುವರಿಸಬೇಕೆಂದು ಮಾಡಲಾಗಿದೆ. ಶ್ಯಾನುಭೋಗರ ಜಾಗದಲ್ಲಿ ಈಗ ಗ್ರಾಮಲೆಕ್ಕಿಗರನ್ನು ನೇಮಿಸಲಾಗಿದೆ ಮತ್ತು ಈಗ ಅವರು ಕೆಲಸ ಮಾಡುತ್ತಿದ್ದಾರೆ. ಮುಂದೆ ಗ್ರಾಮಲೆಕ್ಕಿಗರ ಕೊರತೆಯಾದರೆ ಶ್ಯಾನುಭೋಗರ ಕಡೆ ನೋಡಬಹುದು. ಸದ್ಯಕ್ಕೆ ಗ್ರಾಮಲೆಕ್ಕಿಗರ ಕೊರತೆಯಿಲ್ಲ; ಕೊರತೆ ಬಂದಾಗ ನೋಡಲಾಗುವುದು.

ಶ್ರೀ ಕಡಿದಾಳ್ ದಿವಾಕರ್.—ಇಪ್ಪತ್ತು ವರ್ಷಗಳ ಸೇವೆ ಸಲ್ಲಿಸಿ, ಸ್ವಯಿಚ್ಛೆಯಿಂದ ನಿವೃತ್ತರಾಗ ಬಯಸುವ ಸರ್ಕಾರಿ ನೌಕರರಿಗೆ ವಿಶ್ರಾಂತಿ ವೇತನ ಕೊಡುವುದಕ್ಕೆ ಅವಕಾಶವಿದೆ. ಅದೇ ರೀತಿ ಇಪ್ಪತ್ತು ವರ್ಷಗಳ ಸೇವೆ ಸಲ್ಲಿಸಿ ಇಂದು ಯಾವುದೋ ಕಾರಣದಿಂದ ಆರ್ಥಿಕ ದುಸ್ಥಿತಿಯಲ್ಲಿರುವ ಅಥವಾ ನಿರ್ಗತಿಕರಾಗಿರುವ ಮಾಜಿ ಶ್ಯಾನುಭೋಗರುಗಳಿಗೆ ವಿಶ್ರಾಂತಿ ವೇತನ ನೀಡುವುದರ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ಇಪ್ಪತ್ತು ವರ್ಷಗಳ ಸೇವೆಯ ಪ್ರಶ್ನೆ ಬರುವುದಿಲ್ಲ; ಶ್ಯಾನುಭೋಗರ ವೃತ್ತಿ ಅನುವಂಶಿಕವಾದದ್ದು. ೧೫—೨೦ ವರ್ಷಗಳ ಸೇವೆ ಮಾಡಿರುವ ಶ್ಯಾನುಭೋಗರುಗಳಿಗೆ ಕಾನೂನು ಪ್ರಕಾರ ಏನಾದರೂ ಕೊಡಲಾಗುವುದು.

ಶ್ರೀ ಜೆ. ಎಚ್. ಪಟೇಲ್ --ಯಾವ ಕಾರಣಕ್ಕೋ ಏನೋ ಮಾನ್ಯ ಮಂತ್ರಿಗಳಿಗೆ ಪಟೇಲರು ಮತ್ತು ಶ್ಯಾನಭೋಗರನ್ನು ಕಂಡರೆ ಆಗುವುದಿಲ್ಲ. ಆದರೆ, ಎಲ್ಲ ಪಟೇಲರು ಮತ್ತು ಶ್ಯಾನುಭೋಗರನ್ನು ಒಂದೇ ಮಟ್ಟದಲ್ಲಿ ನೋಡುವುದು ಬೇಡ. ಇಂದು ಬಹಳ ಮಂದಿ ಶ್ಯಾನುಭೋಗರು ಮತ್ತು ಪಟೇಲರು ನಿರ್ಗತಿಕರಾಗಿ ದಾರುಣ ಪರಿಸ್ಥಿತಿಯಲ್ಲಿರುವರು. ಅವರಲ್ಲಿ ಕೆಲವರು ವೃತ್ತಿಯಲ್ಲಿದ್ದಾಗ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಇವರಿಗಿಂತಲೂ ಚೆನ್ನಾಗಿ ಕೆಲಸ ಮಾಡಿದ್ದಾರೆ!

ಶ್ರೀ ಜೆ. ಎಚ್. ಪಟೇಲ್.— ಮಾನವೀಯ ದೃಷ್ಟಿಯಿಂದಲಾದರೂ ಅವರಿಗೆ ವಿಶ್ರಾಂತಿ ವೇತನ ಅಥವಾ ಇನ್ಯಾವುದೇ ವೇತನವನ್ನು ನೀಡುವುದು ಯೋಗ್ಯವೆಂದು ನನ್ನ ಭಾವನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು, ಪಟೇಲರು ಮತ್ತು ಶ್ಯಾನುಭೋಗರನ್ನು ಕಂಡರೆ ನನಗಾಗಂವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಪಟೇಲರು ಮತ್ತು ಶ್ಯಾನುಭೋಗರನ್ನು ಮನೆಗೆ ಕಳುಹಿಸಿದ್ದು ನಾನಲ್ಲ. ನಾನು ಬರುವುದಕ್ಕೆ ಪಂಚಾಯತಿಯೇ ಅವರನ್ನು ಕಳುಹಿಸಲಾಗಿತ್ತು. ಅವರುಗಳು ಹೋದಮೇಲೆ ಮಾನವೀಯ ದೃಷ್ಟಿಯ ಮಾತು ಬರುತ್ತಿದೆ. ಮನೆಗೆ ಕಳುಹಿಸಿದ ಮೇಲೆ ಮಾನವೀಯತೆಯನ್ನು ನಾನು ಎಲ್ಲಿಂದ ತರಲಿ ?

MR. SPEAKER.– Questions are over.

Now we will take up Calling Attention to matters of urgent public importance.

Calling Attention to matters of urgent public importance.

(i) re. Abnormal rise in prices in hotels.

SRI ANDANIAH (KUNIGAL).—Sir, I call the attention of the Minister for Food and Forests to the hardship caused to the students, poor category of people and tourists due to abnormal rise in prices in Hotels.

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಖಾತೆಯ ಸಚಿವರು).-- ಸ್ವಾಮಿ, ನನ್ನ ಹೇಳಿಕೆ ಈ ರೀತಿ ಇದೆ.–

ದಿನಾಂಕ ೧೮ನೇ ಸೆಪ್ಟೆಂಬರ್ ೧೯೭೬ ರಲ್ಲಿ ಎಲ್ಲ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳನ್ನು ಸ್ಪಾರ್ ಹೋಟೆಲ್‌ಗಳನ್ನು ಸೇರಿಸಿ ಅವುಗಳ ವಾರ್ಷಿಕ ವ್ಯವಹಾರಗಳ ಆಧಾರದ ಮೇಲೆ ಈ ಕೆಳಕಂಡಂತೆ ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ.

ಭಾಗ — ಎ : ೫ ಲಕ್ಷಕ್ಕೂ ಹೆಚ್ಚು ರೂಪಾಯಿಗಳ ವಾರ್ಷಿಕ ವ್ಯವಹಾರಗಳಿರುವವು.

ಭಾಗ — ಬಿ : ೨ ಲಕ್ಷ ರೂಪಾಯಿಗಳಿಂದ ೫ ಲಕ್ಷ ರೂಪಾಯಿಗಳ ವಾರ್ಷಿಕ ವ್ಯವಹಾರ ಗಳಿರುವವು.

ಭಾಗ — ಸಿ : ೭೫,೦೦೦ ರೂಪಾಯಿಗಳಿಂದ ೨ ಲಕ್ಷ ರೂಪಾಯಿಗಳ ವಾರ್ಷಿಕ ವ್ಯವಹಾರ ಗಳಿರುವುವು.

ಭಾಗ — ಡಿ : ೭೫,೦೦೦ ರೂಪಾಯಿಗಳವರೆಗೆ ವಾರ್ಷಿಕ ವ್ಯವಹಾರಗಳಿರುವುವು.

ಹೀಗೆ ವಿಂಗಡಿಸಲಾದ ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ವಿತರಣೆ ಮಾಡತಕ್ಕ ಕೆಲವು ಸಾಮಾನ್ಯ ತಿಂಡಿ, ತಿನಸುಗಳ ಬೆಲೆಗಳನ್ನು ಅವುಗಳ ಅಳತೆ ಮತ್ತು ತೂಕದ ಆಧಾರದ ಮೇಲೆ ನಿಗದಿಮಾಡಿದೆ.

ಇತರ ವಸ್ತುಗಳ ಬೆಲೆಗಳು ಗಗನಕ್ಕೆ ಏರುತ್ತಿದ್ದಾಗ ಕರ್ನಾಟಕ ಬೇಳೆಕಾಳುಗಳ ಲೈಸೆನ್ಸ್ ಮತ್ತು ದಾನ್ಯಗಳ ವರ್ತಕರ ವ್ಯವಹಾರಿಕ ಲೈಸೆನ್ಸ್, ಆರ್ಡರುಗಳನ್ನು ಹೊರಡಿಸಿ, ಬೇಳೆಕಾಳು, ದಾನ್ಯಗಳಂ